## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ತುಮಕೂರು

## ವಿಶೇಷ ಮೊಕದ್ದಮೆ.2/2021

ಪ್ರಾ.ಸಾ. ಃ **9**

ದೋ.ಸಾ. ಃ **8**

ದಿ.**14.07.2026**

| | |
|---|---|
| ಹೆಸರು | ಃ ಪಂಚಾಕ್ಷರಿ ಪಟೇಲ್ ಜೆ. |
| ತಂದೆಯ ಹೆಸರು | ಃ ಜಗದೀಶ್ |
| ವಯಸ್ಸು | ಃ **28** ವರ್ಷ |
| ಉದ್ಯೋಗ | ಃ ಫೋಟೋಗ್ರಾಫರ್ |
| ವಾಸಸ್ಥಳ | ಃ ಸತ್ಯಮಂಗಲ, ತುಮಕೂರು |

ಸಾಕ್ಷಿಯನ್ನು ಕರೆಸಿ, ಸತ್ಯಪ್ರತಿಜ್ಞೆಯ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ**

1. ನಾನು 10 ವರ್ಷಗಳಿಂದ ತುಮಕೂರಿನ ಸಿರಾಗೇಟ್ ನ ಸತ್ಯಮಂಗಲದಲ್ಲಿ ಜಗನ್ ಫೋಟೋ ಶಾಪ್ ನಡೆಸುತ್ತಿದ್ದೇನೆ. ನಾನು ಫೋಟೋ ತೆಗೆಯುತ್ತೇನೆ, ವಿಡಿಯೋ ಮಾಡುತ್ತೇನೆ, ಎಡಿಟಿಂಗ್ ಮಾಡುತ್ತೇನೆ ಮತ್ತು ಫೋಟೋಗಳ ಪ್ರಿಂಟ್ ತೆಗೆಯುವುದು ಮಾಡುತ್ತೇನೆ.
2. 4-5 ವರ್ಷಗಳ ಹಿಂದೆ ಸಿಇಎನ್ ಪೋಲೀಸ್ ಠಾಣೆಯ ಪೋಲೀಸ್ ಉಪ ನಿರೀಕ್ಷಕರಾದ ಶಮೀನ್ ರವರು ಮಧ್ಯಾಹ್ನ 3.00 ಗಂಟೆಗೆ ಕ್ಯಾಮೆರಾದೊಂದಿಗೆ ಪೋಲೀಸ್ ಠಾಣೆಗೆ ಹಾಜರಾಗಲು ನನಗೆ ಹೇಳಿದರು. ಅದರಂತೆ ನಾನು ಕ್ಯಾಮೆರಾ ತೆಗೆದುಕೊಂಡು ಸಿಇಎನ್ ಪೋಲೀಸ್ ಠಾಣೆಗೆ ಹೋದೆನು. ತುಮಕೂರಿನ ಕೋರ್ಟಿನಲ್ಲಿ ಗಾಂಜಾ ಪ್ರಕರಣದಲ್ಲಿ ಫೋಟೋ ತೆಗೆಯಬೇಕೆಂದು ಸೂಚಿಸಿದರು. ಶಮೀನಾ ಮೇಡಂ ಜೊತೆಗೆ ತುಮಕೂರು ನ್ಯಾಯಾಲಯಕ್ಕೆ ಹೋದೆನು. ಕೋರ್ಟಿನಲ್ಲಿ ನ್ಯಾಯಾಧೀಶರು ಇದ್ದರು. ಗಾಂಜಾದ ಬಗ್ಗೆ ನ್ಯಾಯಾಧೀಶರ ಮುಂದೆ ಫೋಟೋ ತೆಗೆಯಲು ಹೇಳಿದರು, ನಾನು ಫೋಟೋ ತೆಗೆದೆನು. ನಂತರ ನನ್ನ ಸಮಕ್ಷಮ ಇನ್ವೆಂಟರಿ ಮಹಜರ್ ಮಾಡಿದರು. ಆ ಇನ್ವೆಂಟರಿ ಮಹಜರ್ ಗಳನ್ನು

ನೋಡುತ್ತಿದ್ದು, ಅವುಗಳನ್ನು ನಿಶಾನೆ ಪಿ16 ಮತ್ತು 17 ಎಂದು ಗುರುತಿಸಲಾಗಿದೆ. ನಿಶಾನೆ ಪಿ16 ಮತ್ತು 17 ರಲ್ಲಿರುವ ನನ್ನ ಸಹಿಗಳನ್ನು ನಿಶಾನೆ ಪಿ16(ಬಿ) ಮತ್ತು 17(ಬಿ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ತೆಗೆದ ಫೋಟೋಗಳನ್ನು ನಿಶಾನೆ ಪಿ18 ರಿಂದ 26 ಎಂದು ಗುರುತಿಸಲಾಗಿದೆ. ಈ ಬಗ್ಗೆ ನಾನು ಭಾರತೀಯ ಸಾಕ್ಷ್ಯ ಅಧಿನಿಯಮದ ಕಲಂ 65-ಬಿ ಅಡಿಯಲ್ಲಿ ಪ್ರಮಾಣಪತ್ರವನ್ನು ನೀಡಿರುತ್ತೇನೆ. ಆ ಪ್ರಮಾಣಪತ್ರವನ್ನು ನೋಡುತ್ತಿದ್ದು ಅದನ್ನು ನಿಶಾನೆ ಪಿ39 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ39(ಎ) ಎಂದು ಗುರುತಿಸಲಾಯಿತು. ಈ ಬಗ್ಗೆ ನಾನು ಪೋಲೀಸರಿಗೆ ಹೇಳಿಕೆ ಕೊಟ್ಟಿರುತ್ತೇನೆ.

**ಪಾಟೀ ಸವಾಲು ಶ್ರೀ.ಹೆಚ್.ವಿ.ರಂಗನಾಥ ರೆಡ್ಡಿ, ವಕೀಲರಿಂದ 2 ನೇ ಆರೋಪಿತನ ಪರವಾಗಿ:**

3. ಫೋಟೋ ಸ್ಟುಡಿಯೋವನ್ನು ಮನೆಯಲ್ಲಿ ನಡೆಸುತ್ತಿದ್ದೇನೆ. ಅದರ ಬಗ್ಗೆ ಲೈಸೆನ್ಸ್ ತೆಗೆದುಕೊಂಡ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ತಂದೆ ತೆಗೆದುಕೊಂಡಿರಬಹುದು. ನನ್ನ ತಂದೆಯ ಸ್ಟುಡಿಯೋವನ್ನು ನಾನು ನಡೆಸುತ್ತಿದ್ದೇನೆ. ನನಗೆ ಫೋಟೋ ತೆಗೆಯುವ ವಿಶೇಷ ಪರಿಣತಿ ಇಲ್ಲ. ಶಮೀನ ಮೇಡಂ ನನಗೆ ನೋಟೀಸ್ ಕೊಟ್ಟಿರಲಿಲ್ಲ. ಶಮೀನಾ ಮೇಡಂ ರವರು ಗಾಂಜಾ ಸೊಪ್ಪು ಎಂದು ಹೇಳಿದ್ದಕ್ಕೆ ನಾನು ಫೋಟೋ ತೆಗೆದಿದ್ದೇನೆ. ನಾನು ಸಹಿ ಮಾಡಿದ ದಾಖಲೆಗಳಲ್ಲಿ ಏನೆಲ್ಲಾ ಬರೆದಿದ್ದಾರೆಂದು ಈಗ ಹೇಳಲಾಗುವುದಿಲ್ಲ. ಪೋಲೀಸರು ನನ್ನ ಹೇಳಿಕೆಯನ್ನು ಮಾಡಿಕೊಂಡಿಲ್ಲ. ಸಹಿಯನ್ನು ನನ್ನ ಮನೆಯ ಹತ್ತಿರ ತೆಗೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ನನ್ನನ್ನು ಪೋಲೀಸರು ಕರೆದುಕೊಂಡು ಬರುವಾಗ ಈ ರೀತಿ ಹೇಳಬೇಕೆಂದು ಹೇಳಿದ್ದರಿಂದ ನಾನು ಈ ರೀತಿ ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಫೋಟೋ ತೆಗೆದಿಲ್ಲ, ಪೋಲೀಸರು ಹೇಳಿದಂತೆ ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಶ್ರೀ.ಜಿ.ಎಸ್.ರೆಹಮಾನ್, ವಕೀಲರಿಂದ 1 ನೇ ಆರೋಪಿತನ ಪರವಾಗಿ:**

4. ಫೋಟೋ ತೆಗೆದಿದ್ದಕ್ಕೆ ಪೋಲೀಸರಿಗೆ ಬಿಲ್ ಅನ್ನು ಕೊಟ್ಟಿದ್ದೇನೆ.

(ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ನಿವೇದಿಸಿರುತ್ತಾರೆ).

ಮರು ವಿಚಾರಣೆ : ಇಲ್ಲ

(ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಲ್ಪಟ್ಟಿತು).

ಓದಿ ಹೇಳಿ ಕೇ ಸರಿ ಇದೆ ಎಂದು ಒಪ್ಪಿದ್ದಾರೆ.

ಸಹಿ/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು